ಈ) 25,000 ರೂ.ಗಳಿಗೆ ಒಂದೊಂದು ಎಸ್ಟಿಮೇಟ್ ಮಾಡಿ ಇಲಾಖೆಯವರೇ ಕೆಲಸ ಮಾಡಿಸಿರುವುದು ನಿಜವೇ ;

ಉ) ಟೆಂಡರ್ ಕರೆಯದೇ ಈ ರೀತಿ ಇಲಾಖೆಯವರು ಕೆಲಸ ಮಾಡಿರುವುದು ಕ್ರಮ ಬದ್ಧವಾಗಿದೆಯೇ?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಕಳೆದ ಮೂರು ವರ್ಷಗಳಲ್ಲಿ :-

1. ಮೂಲ ಕಾಮಗಾರಿಗಳಿಗೆ ರೂ. 299.30 ಲಕ್ಷಗಳು
2. ನಿಯಮಿತಕಾಲಿಕ ನವೀಕರಣಕ್ಕೆ ರೂ. 53.79 ಲಕ್ಷಗಳು
3. ಪ್ರವಾಹ ಹಾನಿ ದುರಸ್ತಿಗೆ ರೂ. 7.62 ಲಕ್ಷಗಳು

ಖರ್ಚು ಮಾಡಲಾಗಿದೆ.

ಆ) (ರೂ. ಲಕ್ಷಗಳಲ್ಲಿ)

	ಮೂಲಕಾಮಗಾರಿಗಳು	ನಿಯತಕಾಲಿಕ ನವೀಕರಣ	ಪ್ರವಾಸ ಹಾನಿ ದುರಸ್ತಿ
1988 – 89	55.26	04.93	4.21
1989 – 90	40.92	20.17	–
1990 – 91	203.00	28,69	3.41

ಇ) 1) ಮೂಲ ಕಾಮಗಾರಿಗಳು : 68.72 ಲಕ್ಷಗಳು 88–89 ಹಾಗೂ 89–90 ರಲ್ಲಿ ಬಹುತೇಕ ಕೆಲಸಗಳನ್ನು ಟೆಂಡರ್ ಆಧಾರದ ಮೇಲೆ ತೆಗೆದುಕೊಳ್ಳಲಾಗಿದೆ. 90–91ರಲ್ಲಿ ಮಂಗಳೂರು ವಿಭಾಗಕ್ಕೆ ರಸ್ತೆ ಬಲಪಡಿಸಲು ಎರಡು ಕೆಲಸಗಳು ಮಾತ್ರ ಮಂಜೂರಾಗಿ ಕೇಂದ್ರ ಸರ್ಕಾರದ ಯಂತ್ರೋಪಕರಣಗಳನ್ನು ಬಳಸಲು ಇಲಾಖಾವತಿಯಿಂದ ತೆಗೆದುಕೊಳ್ಳಲಾಯಿತು.

2) ನಿಯತಕಾಲಿಕ ನವೀಕರಣ : ರೂ. 47.39 ಲಕ್ಷಗಳು.

3) ಪ್ರವಾಹ ಹಾನಿ ದುರಸ್ತಿ : ರೂ. 7.62 ಲಕ್ಷಗಳು

ಈ) ಇಲ್ಲ .

ಉ) ಕ್ರಮ ಬದ್ಧವಾಗಿದೆ.

ಇಂಜನಿಯರ್‌ಗಳ ವರ್ಗಾವಣೆ

1485 (ಎ) - ಶ್ರೀ ಚಿಕ್ಕಮಾದು (ಹುಣಸೂರು) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಕೆಲವು ಕಿರಿಯ ಇಂಜುನಿಯರ್, ಸಹಾಯಕ ಇಂಜಿನಿಯರ್ ಹಾಗೂ ಸಹಾಯಕ ಕಾರ್ಯಪಾಲಕ ಇಂಜನಿಯರ್‌ಗಳು ಒಂದೇ ಸ್ಥಳದಲ್ಲಿ 4 ರಿಂದ 5 ವರ್ಷದವರೆಗೆ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) –

ಬಂದಿದೆ.